**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. :64 ಪ್ರಾ.ಸಾ. : 25**

ಸಾಕ್ಷಿಯ ಹೆಸರು : ಕೆರಿಯಾ ದೇವ ನಾಯಕ್
ತಂದೆಯ ಹೆಸರು : ದೇವ ನಾಯಕ್
ವಯಸ್ಸು : 78 ವರ್ಷ
ಉದ್ಯೋಗ : ರೈತಾಪಿ
ವಾಸ : ಕಾನಗೋಡ, ಸಿದ್ದಾಪುರ ತಾಲೂಕು.

**ದಿನಾಂಕಃ 24-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಾನಗೋಡು ಗ್ರಾಮದಲ್ಲಿ ಹುಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ಆರೋಪಿ ನನಗೆ ಪರಿಚಯ ಇದ್ದಾನೆ. ಕಾರಣ ನಾವು ಒಂದೇ ಗ್ರಾಮದವರು ಆಗಿದ್ದೇವೆ. ಆರೋಪಿ ಒಂದು ಬಾರಿ ನಮ್ಮ ಗ್ರಾಮ ಪಂಚಾಯತಿ ಅಧ್ಯಕ್ಷ ಆಗಿದ್ದರು. ನಾನು ಕೃಷಿ ಕೆಲಸ ಮಾಡುತ್ತೇನೆ. 2001-02 ರಲ್ಲಿ ನಮ್ಮ ಗ್ರಾಮಕ್ಕೆ ಸರ್ಕಾರದಿಂದ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ರೂ.20 ಲಕ್ಷ ಮಂಜೂರು ಆಗಿತ್ತು. ಆ ಬಗ್ಗೆ ಎಷ್ಟು ಫಲಾನುಭವಿಗಳು ಇದ್ದರೂ ಎಂದೂ ಗೊತ್ತಿಲ್ಲ. ಆದರೇ ನಾನು ಒಬ್ಬ ಫಲಾನುಭವಿ ಆಗಿದ್ದೆ. ನನಗೆ ಆ ಯೋಜನೆ ಅಡಿಯಲ್ಲಿ ಒಂದು ಶೌಚಾಲಯವನ್ನು ನಿರ್ಮಿಸಿ ಕೊಟ್ಟರು. ಅದಕ್ಕೆ ಹಣವನ್ನು ನನಗೆ ಕೊಟ್ಟಿರುವುದಿಲ್ಲ ಅದನ್ನು ಅವರೇ ನಿರ್ಮಿಸಿ ಕೊಟ್ಟರು. ಆ ಶೌಚಾಲಯ ಗೂಡಿನ ರೀತಿ ಇತ್ತು ಅದನ್ನು ತಂದು ಕೊಟ್ಟಿದ್ದರು. ಅದನ್ನು ನನ್ನ ಮನೆಯ ಬಳಿ ನಿರ್ಮಾಣ ಮಾಡಲಿಲ್ಲ ಅದನ್ನು ಹಾಗೇಯೇ ತಂದು ಕೊಟ್ಟಿದ್ದರು. ಅದನ್ನು ಬಿಚ್ಚಲು ತೆಗೆಯಲು ಆಗುತ್ತಿತ್ತು. ಅದನ್ನು 2-3 ವರ್ಷ ನಾವು ಉಪಯೋಗಿಸಿದೆವು. ನಂತರ ನಾವು ಬೇರೆ ಮನೆ ಮಾಡಿಕೊಂಡು ಹೋದೆವು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ಆ ಯೋಜನೆ ಅಡಿಯಲ್ಲಿ 210 ಫಲಾನುಭವಿಗಳನ್ನು ಗುರುತಿಸಿದ್ದರು ಮತ್ತು ನನಗೆ ರೂ.3000/- ಅನ್ನು ಆ ಯೋಜನೆ ಅಡಿಯಲ್ಲಿ ಕೊಡಬೇಕಾಗಿತ್ತು ಮತ್ತು ಅದನ್ನು ಕೊಡಲಿಲ್ಲ ಹಾಗೂ ಶೌಚಾಲಯ ಸಹ ನಿರ್ಮಾಣ ಮಾಡಿ ಕೊಡಲಿಲ್ಲ ಎಂದು ಲೋಕಾಯುಕ್ತ ಪೊಲೀಸ ನವರಿಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-61 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

3. ಸಿದ್ದಪಡಿಸಿದ ಸಿಮೆಂಟ್ ನ ಶೌಚಾಲಯವನ್ನು ನನ್ನ ಮನೆಗೆ ತಂದು ಅಳವಡಿಸಿದ್ದರು. ನಾವು ಅದನ್ನು ಬಳಸುತ್ತಿದ್ದೆವು.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ